**ಸಾಕ್ಷಿಗೆ ದಿನಾಂಕಃ03-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. BTK ವಕೀಲರಿಂದ ::**

ನನ್ನ ಅಜ್ಜ ಮರುಳಸಿದ್ದಪ್ಪ ರವರಿಗೆ 2 ಗಂಡು ಮತ್ತು ಒಂದು ಹೆಣ್ಣು ಮಕ್ಕಳು ಇದ್ದು ಅವರ ಹೆಸರುಗಳು ಮಲ್ಲೇಶಪ್ಪ ಬರ್ಗೇಶಪ್ಪ ಮತ್ತು ಮಹೇಶ್ವರಮ್ಮ ಆಗಿರುತ್ತದೆ. ಮರುಳಸಿದ್ದಪ್ಪನ ತಮ್ಮನ ಹೆಸರು ಬಸಪ್ಪ ಆಗಿರುತ್ತದೆ. ಸದರಿ ಬಸಪ್ಪ ರವರಿಗೆ 3 ಗಂಡು ಮತ್ತು 3 ಹೆಣ್ಣು ಮಕ್ಕಳು ಇರುತ್ತಾರೆ. ಸದರಿಯವರ ಪೈಕಿ ವಾದಿಯ 4 ನೇ ಮಗು ಆಗಿರುತ್ತಾರೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತನ್ನು ನಾವುಗಳು ಒಟ್ಟು ಕುಟುಂಬದಲ್ಲಿ ಇದ್ದ ಸಮಯದಲ್ಲಿ ಬಸಪ್ಪನ ಹೆಸರಿಗೆ ಖರೀದಿ ಮಾಡಲಾಗಿತ್ತು. ಸದರಿ ಸ್ವತ್ತನ್ನು 1984 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಮತ್ತು ಪಹಣಿ 2001-02 ರಲ್ಲಿ ಆಗಿರುತ್ತದೆ. ವಿಭಾಗದ ಅನ್ವಯವೇ ನಾವುಗಳು ಆಸ್ತಿ ಅನುಭವಿಸುತ್ತಾ ಬಂದಿರುತ್ತೇವೆ ಎಂದರೆ ಸರಿ. ನಮ್ಮ ಸ್ವತ್ತಿನ ಪಶ್ಚಿಮಕ್ಕೆ ರಸ್ತೆ ಇರುತ್ತದೆ. ಸದರಿ ರಸ್ತೆ ಕಣಗಬಟ್ಟೆಯಿಂದ ನಾರಾಣಪುರಕ್ಕೆ ಹೋಗುವ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪೂರ್ವಕ್ಕೆ ಮೊದಲಿಗೆ ನಮ್ಮ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ವಿಸ್ತೀರ್ಣ ಒಂದು ಎಕರೆ ಆಗಿರುತ್ತದೆ. ಸದರಿ ಆಸ್ತಿಯ ನಂತರದಲ್ಲಿ ವಾದಿಯ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿಯವರ ಆಸ್ತಿ ವಿಸ್ತೀರ್ಣ 2 ಎಕರೆ 18 ಗುಂಟೆ ಆಗಿರುತ್ತದೆ. ಸದರಿ ಸ್ವತ್ತುಗಳು ಪ್ರಸ್ತುತದಲ್ಲಿ 2 ಸರ್ವೇ ನಂಬರ್ ಆಗಿರುತ್ತದೆ ಎಂದರೆ ಸರಿ. ಸದರಿ ಸರ್ವೇ ನಂಬರ್ ಗಳು ಸರ್ವೇ ನಂಬರ್ 92/2 ಬಿ ಮತ್ತು 92/3 (ಪ್ರಸ್ತುತದಲ್ಲಿ ಸರ್ವೇ ನಂಬರ್ 92/7) ಆಗಿರುತ್ತದೆ ಎಂದರೆ ಸರಿ. ನಮ್ಮ ಸ್ವತ್ತಿನ ದಕ್ಷಿಣಕ್ಕೆ ಕುಮಾರಪ್ಪ ರವರ ಜಮೀನು ಇರುತ್ತದೆ. ನಮ್ಮ ಸ್ವತ್ತಿನಲ್ಲಿ 30 ವರ್ಷಗಳ ಹಳೇಯ ಅಡಿಕೆ ತೋಟ ಇರುತ್ತದೆ. ಅಡಿಕೆ ತೋಟದ ಪಕ್ಕದಲ್ಲಿ ಸಾಗುವಾನಿ ಮರಗಳ ದಕ್ಷಿಣದ ಕಡೆ ಹಾಕಿರುತ್ತೇವೆ ಎಂದರೆ ಸರಿ. ಸಾಗುವನಿ ಗಿಡಗಳ ನಂತರದಲ್ಲಿ ತಂತಿ ಬೇಲಿ ಅಳವಡಿಸಿರುತ್ತೇವೆ ಎಂದರೆ ಸರಿ. ಸಾಗುವಾನಿ ಗಿಡ ಹಾಗೂ ತಂತಿ ಬೇಲಿ ಮಧ್ಯದಲ್ಲಿ ವಾದಿಗಳಿಗೆ ಅವರ ಜಮೀನುಗಳಿಗೆ ಹೋಗಲು ದಾರಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾರಿಯನ್ನು ನಾವು ಓಡಾಡಲು ಇಟ್ಟುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಾಗುವಾನಿ ಮರಗಳಿಗೆ 30 ವರ್ಷಗಳ ಆಗಿರಬಹುದು.

ನಿಪಿ15 ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ ನಾನು ಈಗ ಹೇಳುತ್ತಿರುವ ಸಾಗುವಾನಿ ಮರ ಆಗಿರುತ್ತದೆ ಎಂದು ನೋಡಿ ಒಪ್ಪಿರುತ್ತಾರೆ. ಮೇಲೆ ಹೇಳಿದ ರಸ್ತೆಯನ್ನು ವಾದಿಗಳು ಉಪಯೋಗಕ್ಕೆ ಅಡ್ಡಪಡಿಸಲು ಅಲ್ಲಿ ಸಣ್ಣದಾದ ತೆಂಗಿನ ಸಸಿ ಅಳವಡಿಸಿರುತ್ತೇವೆ ಎಂದರೆ ಸಾಕ್ಷಿಯು ಆ ಕಾರಣಕ್ಕೆ ನೆಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾರಿಯ ಉಪಯೋಗಕ್ಕೆ ವಾದಿಗೆ ನಾನು ತೋಂದರೆ ನೀಡಿದ ಕಾರಣ ಅದರ ಬಗ್ಗೆ ಪೋಲೀಸರಿಗೆ ಅವರು ದೂರನ್ನು ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನಾನು ದಾರಿಗೆ ಅಡ್ಡಪಡಿಸಬಾರದೆಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಆದ ವಿಭಾಗದ ಸಮಯದಿಂದಲೂ ಸದರಿ ದಾರಿಯನ್ನು ವಾದಿ ಉಪಯೋಗಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಅವರ ಭಾಗದ ಒಂದು ಗುಂಟೆ ಜಾಗವನ್ನು ಅಧಿಕವಾಗಿ ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾರಿಯ ವಾದಿಯ ಉಪಯೋಗಕ್ಕೆ ನಿರಂತರವಾಗಿ ತೊಂದರೆ ನೀಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ.

ವಾದಿಯು ಅವರ ಸ್ವತ್ತಿಗೆ ಹೋಗಲು ಕಣಬಗಟ್ಟೆ - ನಾರಾಣಪುರದಿಂದ ಹನುವನಹಳ್ಳಿಗೆ ಹೋಗುವ ರಸ್ತೆಯಿಂದ ಅವಕಾಶ ಇರುತ್ತದೆ. ಸದರಿ ರಸ್ತೆಯು ವಾದಿಯ ಜಮೀನಿನ 5-6 ಜಮೀನು ಬಿಟ್ಟು ಇರುತ್ತದೆ ಎಂದರೆ ಸಾಕ್ಷಿಯು 2 ಜಮೀನು ಬಿಟ್ಟು ಇರುತ್ತದೆ ಎಂದು ನುಡಿಯುತ್ತಾರೆ. ವಾದಿಯ ಜಮೀನು ಮತ್ತು ಸದರಿ ರಸ್ತೆ ನಡುವಿನಲ್ಲಿ 3 ಜನರ ಜಮೀನು ಇರುತ್ತದೆ. ನಾನು ಹೇಳುತ್ತಿರುವ ರಸ್ತೆಯಿಂದ ಯಾವತ್ತು ಸಹ ಅವರ ಆಸ್ತಿಗೆ ಹೋಗಿರುವುದಿಲ್ಲ ಮತ್ತು ದಾವಾ ಬಿ ಸ್ವತ್ತಿನಿಂದಲೇ ವಾದಿ ಮೊದಲಿನಿಂದ ಹೋಗುತ್ತಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಬಿ ಸ್ವತ್ತು ಒಂದೇ ಸರ್ವೇ ನಂಬರ್ ನಲ್ಲಿ ಇರುವ ಕಾರಣ ನಾನು ಸದರಿ ದಾರಿಯನ್ನು ಬಿಟ್ಟು ಕೊಡಲು ಬದ್ದನಾಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಕಾಶೆ ಕಂಡ ದಾರಿಯಿಂದ ಅವರ ಆಸ್ತಿಗೆ ಹೋಗಲು ಅವಕಾಶ ಇರುತ್ತದೆ ಎಂದು ನುಡಿಯುತ್ತಾರೆ.

ನಮಗೂ ಹಾಗೂ ವಾದಿಗೂ ಸುಮಾರು 30 ವರ್ಷಗಳಿಂದ ತಕರಾರು ಇರುತ್ತದೆ. ಅದೇ ಕಾರಣಕ್ಕೆ ವಾದಿಯ ದಾರಿಯ ಉಪಯೋಗಕ್ಕೆ ತೊಂದರೆ ನೀಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ಅಡಿಕೆ ತೋಟವನ್ನು ಮಾಡಿಕೊಂಡಿರುತ್ತಾರೆ. ವಾದಿಯು ಅವರ ತೋಟದ ವ್ಯವಸಾಯ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗಲು ದಾವಾ ಬಿ ಸ್ವತ್ತು

ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಬೇರೆ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಡಿ2 ಕ್ಕೂ ಹಾಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಬಿ ಸ್ವತ್ತು ಹೊರತುಪಡಿಸಿ ವಾದಿಗೆ ಅವರ ಆಸ್ತಿಗೆ ಹೋಗಲು ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: